CIVIL JUDGE AND JMFC COURT BAGAVADI
05 JUN 2026
Sheristedar (Adm)

ಅಸಲ ದಾವಾ ನಂ : 365/2025

**ಮೆ:: ಪ್ರಧಾನ ಸಿವ್ಹಿಲ್ ನ್ಯಾಯಾಧೀಶರ ನ್ಯಾಯಾಲಯ ಬಸವನ ಬಾಗೇವಾಡಿ**

**ಇವರ ನ್ಯಾಯಾಲಯದಲ್ಲಿ**

1) ರಾಧಿಕಾ ತಂ. ಸಂಗಪ್ಪ ಮಾದರ
ಹಾಗೂ ಇನ್ನೊಬ್ಬರು --ವಾದಿಯರು

ವಿರುದ್ಧ

1) ಕರ್ನಾಟಕ ರಾಜ್ಯ ಸರಕಾರವನ್ನು ಪ್ರತಿನಿದಿಸಿ
ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪೂರ
ಹಾಗೂ ಇತರರು --ಪ್ರತಿವಾದಿಯರು

**ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಕೆಳಗೆ 2ನೇ ವಾದಿಯ**

**ನುಡಿಸಾಕ್ಷಿ ಸ್ವರೂಪದ ಪ್ರಮಾಣ ಪತ್ರ**

ಇದರಲ್ಲಿ ನಾನು ಸಂಗಪ್ಪ ತಂ. ಪರಸಪ್ಪ ಮಾದರ ವಯಾ: 45 ಉದ್ಯೋಗ: ~~[illegible]~~ ಖಾಸಗಿ ಉದ್ಯೋಗ ಸಾ: ಕಣಕಾಲ ತಾ: ಬಸವನಬಾಗೇವಾಡಿ ಹಾ।ವ। ಚಿಂಚವಾಡ ಪೂಣೆ (ಮಹಾರಾಷ್ಟ್ರ) ಇಂದು ಬಸವನ ಬಾಗೇವಾಡಿಯಲ್ಲಿ ಹೀಗೆ ಸತ್ಯ ಪ್ರತಿಜ್ಞೆ ಮಾಡಿ ಹೇಳುತ್ತೇನಲ್ಲಾ.

ಸದರ ದಾವಾದಲ್ಲಿ ನಾನು 2 ನೇ ವಾದಿ ಇರುತ್ತೇನೆ. 1 ನೇ ವಾದಿ ಅಲ್ಪವಯಿ ನನ್ನ ಮಗಳಿರುತ್ತಾಳೆ. ನನಗೆ ಪ್ರತಿವಾದಿಯರ ಪರಿಚಯವಿದೆ. ದಾವಾದ ಮಾಹಿತಿ ಗೊತ್ತಿರುತ್ತದೆ.

ನಾವು ಬಸವನ ಬಾಗೇವಾಡಿ ತಾಲೂಕಿನ ಕಣಕಾಲ ಗ್ರಾಮದ ಖಾಯಂ ರಹವಾಸಿ ಇರುತ್ತೇವೆ. 1 ನೇ ವಾದಿಯ ಹೆಸರನ್ನು ಶಾಲೆಗೆ ಸೇರಿಸುವಾಗ ಮೌಖಿಕವಾಗಿ 1 ನೇ ವಾದಿಯ ಜನನ ದಿನಾಂಕವನ್ನು **21-04-2009** ಅಂತಾ ಹೇಳಿದ್ದು ಇರುತ್ತದೆ ಆದರೆ

ಸಂಗಪ್ಪ

No. of Corrections: One only
Sheristedar (Adm)

ಪ್ರತಿವಾದಿಯರ ಕಾರ್ಯಾಲಯದವರು ನಜರ ಚೂಕಿನಿಂದ 1 ನೇ ವಾದಿಯ ಜನನ ದಿನಾಂಕವನ್ನು **05-06-2009** ಅಂತಾ ತಪ್ಪು ದಾಖಲಿಸಿಕೊಂಡಿದ್ದಾರೆ, ಆದರೆ 1 ನೇ ವಾದಿಯ ನಿಜವಾದ ಜನನ ದಿನಾಂಕ **21-04-2009** ಅಂತಾ ಇರುತ್ತದೆ ಅದೇ ರೀತಿ 1ನೇ ವಾದಿಯ ಜನನ ಉತಾರೆಯಲ್ಲಿ ದಿನಾಂಕ : **21-04-2009** ಅಂತಲೇ ಇರುತ್ತದೆ. ನಾನು 1ನೇ ವಾದಿಯ ಶಾಲಾ ದಾಖಲಾತಿಗಳನ್ನು ಮುಂದಿನ ವ್ಯಾಸಂಗಕ್ಕೆ ಪ್ರವೇಶ ಹೊಂದಲು ತೆಗೆಸಿ ನೋಡಲಾಗಿ ಅದರಲ್ಲಿ 1 ನೇ ವಾದಿಯ ಜನನ ದಿನಾಂಕವು **05-06-2009** ಅಂತಾ ತಪ್ಪು ನಮೂದಾಗಿದ್ದು ಕಂಡು ಬಂದ ತಕ್ಷಣವೇ ನಾನು ಸಂಬಂಧಿಸಿದ ಅಧಿಕಾರಿಗಳಲ್ಲಿ ಹೋಗಿ 1 ನೇ ವಾದಿಯ ಶಾಲಾ ದಾಖಲಾತಿಯಲ್ಲಿ 1 ನೇ ವಾದಿಯ ಜನನ ದಿನಾಂಕವು **21-04-2009** ಅಂತಾ ನಮೂದಾಗದೇ **05-06-2009** ಅಂತಾ ತಪ್ಪು ನಮೂದಾಗಿದೆ ಅಂತಾ ವಿಚಾರಿಸಲಾಗಿ. ಕಾರಣ ತಾವು 1 ನೇ ವಾದಿಯ ಶಾಲಾ ದಾಖಲಾತಿಯಲ್ಲಿ ತಪ್ಪು ನಮೂದಾಗಿರುವ **05-06-2009** ಬದಲಾಗಿ **21-04-2009** ಅಂತಾ ತಿದ್ದುಪಡಿ ಮಾಡಲು ಪ್ರತಿವಾದಿಯರಿಗೆ ವಿನಂತಿಸಿಕೊಂಡೆನು. ಆಗ ಸದರಿ ಪ್ರತಿವಾದಿಯರ ಕಾರ್ಯಾಲಯದವರು ನಮಗೆ ಜನ್ಮ ದಿನಾಂಕ ತಿದ್ದುಪಡಿ ಮಾಡಲು ಅಧಿಕಾರ ಇರುವದಿಲ್ಲ. ನೀವು ಕೋರ್ಟಿಗೆ ಹೋಗಿ ಕೋರ್ಟಿನಿಂದ ಡಿಕ್ರಿ ಪಡೆದುಕೊಂಡು ಬಂದರೆ ಮಾತ್ರ ಜನ್ಮ ದಿನಾಂಕ ತಿದ್ದುಪಡಿ ಮಾಡುವದಾಗಿ ಹೇಳಿದರು.

ಆಗ ನಾನು ನನ್ನ ವಕೀಲರ ಮುಖಾಂತರ 1ನೇ ವಾದಿಯ ಶಾಲಾ ದಾಖಲಾತಿಯಲ್ಲಿ ತಪ್ಪು ನಮೂದಾದ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡುವಂತೆ ಪ್ರತಿವಾದಿಯರಿಗೆ ದಿನಾಂಕ : 04-09-2005 ರಂದು ನೋಟಿಸು ನೀಡಿದರೂ ಕೂಡಾ ಪ್ರತಿವಾದಿಯರು 1ನೇ ವಾದಿಯ ಶಾಲಾ ದಾಖಲೆಯಲ್ಲಿ ತಪ್ಪು ನಮೂದಾದ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡಿರುವುದಿಲ್ಲ.

ಕಾರಣ 1 ನೇ ವಾದಿಯ ಶಾಲಾ ದಾಖಲಾತಿಗಳಲ್ಲಿ ತಪ್ಪು ನಮೂದಾದ 1 ನೇ ವಾದಿಯ ಜನ್ಮ ದಿನಾಂಕ **05-06-2009** ಇದನ್ನು ತೆಗೆದು **21-04-2009** ಅಂತಾ

Sheristedar (Adm)

संगापा

ತಿದ್ದುಪಡಿ ಮಾಡುವಂತೆ ಪ್ರತಿವಾದಿಯರಿಗೆ ಕರ್ತವ್ಯ ನಿರ್ಭಂದಕಾಜ್ಞೆ ಪಡೆದುಕೊಳ್ಳುವ ಸಲುವಾಗಿ ಈ ದಾವಾ ದಾಖಲಿಸಿರುತ್ತೇನೆ.

ದಾವೆಯೊಂದಿಗೆ ದಾಖಲಾತಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರ್ತಿಸಲು ಜೊತೆಗೆ ದಾವೆಯನ್ನು ನನ್ನ ಮಾಗಣಿಯಂತೆ ಮಂಜೂರಗೊಳಸಬೇಕೆಂದು ಮಾಡಿದ ವಿನಂತಿ ಪ್ರಮಾಣ ಪತ್ರ.

ಮೇಲೆ ಬರೆದ ಯಾವತ್ತು ಮಾಹಿತಿ ವ ಸಂಗತಿಗಳು ನನ್ನ ನಂಬುಗೆಯ ಪ್ರಕಾರ ಹೇಳಿ ಬರೆಯಿಸಿದ್ದು ಅವು ನಿಜವಿರುತ್ತವೆ. ಅಂತಾ ಒಪ್ಪಿ ನಾನು ನನ್ನ ಸಹಿ ಮಾಡಿರುತ್ತೇನೆ. ಅಂತಾ ಮಾಡಿದ ಪ್ರಮಾಣ ಪತ್ರ.

ಬಸವನ ಬಾಗೇವಾಡಿ

ದಿನಾಂಕ; 05-06-2026 ಪ್ರತಿಜ್ಞಾಧಾರಕ

ನನಗೆ ಪ್ರತಿಜ್ಞಾಧಾರಕನ ಪರಿಚಯವಿದೆ.

ಶ್ರೀ.ಜಿ.ಎಸ್.ಚಿಂಚೋಳಿ

ವಕೀಲರು ಬಸವನ ಬಾಗೇವಾಡಿ

No. of Corrections
Nil
Sheristedar (Adm.)

...affirmed / sworn to before me this 05th
day of June-2026
Affidavit ... of the
deponent ... Kannada
...
Sri. G S C Adv.
Place: B. Bagewadi
Date: 05.06.2026
Civil Judge (Jr. Dn.) & JMFC
B. Bagewadi

**ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ವಾದಿಯ ಮುಖ್ಯವಿಚಾರಣೆ ಶ್ರೀ. ಜಿ.ಎಸ್.ಸಿ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

| **ನಿಶಾನೆ ಪಿ** | **ದಾಖಲೆಗಳು** |
|---|---|
| 1. | ಜನನ ಪ್ರಮಾಣ ಪತ್ರವನ್ನು |
| 2. | ಶಾಲಾ ವರ್ಗಾವಣೆ ಪ್ರಮಾಣ ಪತ್ರ |
| 3 | SSLC ಅಂಕ ಪಟ್ಟಿಯನ್ನು |
| 4. | ನೋಟಿಸ ಪ್ರತಿಯನ್ನು |
| 5 ರಿಂದ 9 | ಅಂಚೆ ರಶೀದಿಗಳನ್ನು |
| 10 ರಿಂದ 14 | ಅಂಚೆ ಸ್ವೀಕೃತಿಗಳನ್ನು |
| 15 | 3 ನೇ ಪ್ರತಿವಾದಿಯು ನೀಡಿದ ಹಿಂಬರಹವನ್ನು |
| 16 ಮತ್ತು 17 | ಮೂಲ ಆಧಾರ ಕಾರ್ಡಗಳನ್ನು |

ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಮಾನ್ಯ ಎ.ಜಿ.ಪಿ. ರವರಿಂದಃ-**

3. ನನ್ನ ಮಗಳ ಶಾಲಾ ದಾಖಲಾತಿಯಲ್ಲಿ ದಿಃ 21.04.2009 ಎಂದು ನಮೂದಿಸುವ ಬದಲು ದಿಃ 05.04.2009 ಎಂದು ತಪ್ಪಾಗಿ ನಮೂದು ಆಗಿರುವ ಕಾರಣ ತಿದ್ದುಪಡಿ ಮಾಡಲು ದಾವೆ ಸಲ್ಲಿಸಿರುತ್ತೇನೆ. ನಾನು ಮಾಹಿತಿ ನೀಡಿದ ಮೇರೆಗೆ ಸರಿಯಾಗಿ ನಮೂದು ಮಾಡಿದ್ದರು ಸಹ ತಪ್ಪಾಗಿ ನಮೂದು ಆಗಿರುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಶಾಲೆಯವರಿಂದ ಯಾವುದೇ ತಪ್ಪು ಆಗಿರುವುದಿಲ್ಲ, ನಾನು ನೀಡಿದ ಮಾಹಿತಿ ಮೇರೆಗೆ ಸರಿಯಾ ನಮೂದು ಮಾಡಿಕೊಂಡಿದ್ದರು ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**